ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ

ಸಂಖ್ಯೆ: ಬೃಬೆಂ.ಮ.ಪಾ/ಕಾ.ಅ/ಬ್ಯಾ.ವಿ/ಆ.ಅ/44/2024–25

ಕಾರ್ಯಪಾಲಕ ಅಭಿಯಂತರರು ಕಛೇರಿ
ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ,
ಬೆಂಗಳೂರು–92, ದಿನಾಂಕ: 15–10–2024.

ಆಡಳಿತಾತ್ಮಕ ಅನುಮೋದನೆ

ವಿಷಯ: CONSTRUCTION OF ANGANAVADI BUILDING AT JAKKUR LAYOUT IN WARD NO. 08, AMRUTHAHALLI.

ಉಲ್ಲೇಖ: ಮಾನ್ಯ ವಲಯ ಆಯುಕ್ತರು (ಯ.ವ) ರವರು ಆಡಳಿತಾತ್ಮಕ ಅನುಮೋದನೆ ನಿಡಿರುವ ಮೇರೆಗೆ.

* * * * *

ಮೇಲಿನ ವಿಷಯದಲ್ಲಿ ತಿಳಿಸಿರುವ ಕಾಮಗಾರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೊಡಿಗೇಹಳ್ಳಿ ಉಪ ವಿಭಾಗ ರವರು 2024–25ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–1878 ರಡಿಯಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಕೋರಿರುತ್ತಾರೆ. ಮಾನ್ಯ ವಲಯ ಆಯುಕ್ತರು (ಯ.ವ) ರವರು ಉಲ್ಲೇಖದಂತೆ ಆಡಳಿತಾತ್ಮಕ ಅನುಮೋದನೆ ನೀಡಿರುವುದರಿಂದ, ಮಾನ್ಯ ಆಯುಕ್ತರು ನಿಯೋಜಿಸಿರುವ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬಿ12(1)/ಪಿ.ಆರ್/394/23–24, ದಿನಾಂಕ: 06–12–2023 ರಲ್ಲಿ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ರೂ. 20.00 ಲಕ್ಷಗಳಿಗೆ (ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ) ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಮತ್ತು ಆಡಳಿತಾತ್ಮಕ ಅನುಮೋದನೆಯ ಪುಸ್ತಕದ ಪುಟ ಸಂಖ್ಯೆ _____ ರಲ್ಲಿ ನಮೂದಿಸಿ, ಈ ಕೆಳಗಿನ ಷರತ್ತುಗಳಿಗೊಳಪಡಿಸಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಷರತ್ತುಗಳು:

1. ಅಂದಾಜು ಪಟ್ಟಿಯ ಮೊತ್ತ ರೂ 2.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು.
2. ರಸ್ತೆ ಇತಿಹಾಸ ಪುಸ್ತಕದಲ್ಲಿ (Road History book/Register) ಈ ಕೆಲಸದ ವಿವರಗಳನ್ನು ದಾಖಲಿಸಿ ಕ್ರಮಬದ್ಧಗೊಳಿಸುವುದು.
3. ಧರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ಧರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
4. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೋಟೇಷನ್ ಕರೆದು ಅನುಮೋದನೆ ಪಡೆಯುವುದು.
5. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
6. ಆರ್.ಸಿ.ಸಿ ಡೆಕ್‌ಸ್ಲಾಬ್, ಹರಿನೀರು ಮೋರಿಯ ಆಸರೆಗೋಡೆ ಮತ್ತು ಸೇತುವೆ ಕೆಲಸಗಳ ನಿರ್ವಹಣೆಗೆ ಮೊದಲು ವಿನ್ಯಾಸಕ್ಕೆ ಅನುಮೋದನೆ ಪಡೆಯುವುದು.
7. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
8. ಬಿ.ಎಂ./ಬಿ.ಸಿ. ಅಳವಡಿಸಿಕೊಂಡಿರುವ ರಸ್ತೆಗಳಿಗೆ ನಿಯಮಾನುಸಾರ ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶದ ವರದಿಗಳನ್ನು ಪಡೆದುಕೊಳ್ಳುವುದು.
9. ಸದರಿ ಕೆಲಸವು ಎಂಬ್ಯಾಕ್ ಮೆಂಟ್/ಕಾಂಕ್ರೀಟ್/ಡಾಂಬರೀಕರಣ–ಬಿಎಂ–ಬಿಸಿ/WMM-WBM ಕಾಮಗಾರಿಗಳಾಗಿದ್ದಲ್ಲಿ, MORT & H ಅನ್ವಯ ಗುಣಮಟ್ಟ ಪರೀಕ್ಷೆ ಹಾಗೂ Core-cut ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶವನ್ನು ಪಡೆದುಕೊಳ್ಳುವುದು.

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ,
ಬಿ.ಬಿ.ಎಂ.ಪಿ ಬೆಂಗಳೂರು–92

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ
ಬೃ.ಬೆ.ಮ.ಪಾ., ಬೆಂಗಳೂರು

ಪ್ರತಿಯನ್ನು:

1. ಮಾನ್ಯ ವಲಯ ಆಯುಕ್ತರು (ಯಲಹಂಕ) ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು (ಯಲಹಂಕ) ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ.
3. ಮಾನ್ಯ ಮುಖ್ಯ ಅಭಿಯಂತರರು (ಯಲಹಂಕ) ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ.